# ಡೇಂಜರ್ ಔಷಧಿಗಳು!



ಡಾ. ರತ್ನಾಕರ್, ಶಿವಮೊಗ್ಗ

ಮೂವತ್ತೆಂಟರ ಸರೋಜಮ್ಮನಿಗೆ ಅಲರ್ಜಿ, ಅಸ್ತಮಾ. ನೋಡಿರುವ ಎಲ್ಲ ವೈದ್ಯರು ಹೇಳೋದು ಒಂದೇ, ಹತೋಟಿಗೆ ತರಬಹುದು, ವಾಸಿ ಮಾಡೋಕಾಗಲ್ಲ. ನಾನೂ ಅದನ್ನೇ ಹೇಳಿ ಅಡ್ಡಪರಿಣಾಮಗಳಿಲ್ಲದ, ಶ್ವಾಸಕೋಶಕ್ಕೆ ಎಳೆದು ಕೊಳ್ಳುವ ಇನ್‌ಹೇಲರ್ ಔಷಧಿಯನ್ನು ಕ್ರಮವತ್ತಾಗಿ ತೆಗೆದುಕೊಳ್ಳಲು ಹೇಳಿ ಕಳುಹಿಸಿದೆ. ಮತ್ತೆ ಐದು ವರ್ಷ ಸರೋಜಮ್ಮನ ಪತ್ತೆಯೇ ಇಲ್ಲ. ಸರಿಬಿಡು ವಾಸಿಯಾಗೋಲ್ಲ ಎಂದ ಮೇಲೆ ಎಲ್ಲಾದರೂ ತೋರಿಸಿ ಆರಾಮವಾಗಿರಬಹುದು ಎಂದು ಸುಮ್ಮನಾದೆ. ಆದರೆ ಮತ್ತೆ ಪ್ರತ್ಯಕ್ಷರಾದ ಸರೋಜಮ್ಮನ ಈಗಿನ ತೊಂದರೆ ಕೇಳಿದರೆ ಅಸ್ತಮಾ, ಅಲರ್ಜಿ ವಾಸಿ ಆಯ್ತು. ಇನ್‌ಹೇಲರ್ ಪಂಪ್ ತೆಗೆದುಕೊಳ್ಳುವ ಅವಶ್ಯಕತೆಯೇ ಬರಲಿಲ್ಲ. ಆದರೆ ಮೈತೂಕ ಜಾಸ್ತಿಯಾಗಿದೆ. ತುಂಬಾ ಸುಸ್ತು, ಊಟ ಸೇರೋಲ್ಲ ಎಂದರು. ಸರಿ ಅಸ್ತಮಾ ವಾಸಿಯಾಗೋಕೆ ಏನು ಮಾಡಿದ್ರಿ ಎಂದು ಕೇಳಿದರೆ ನಮ್ಮೂರಲ್ಲೇ ಹೊಸ ಡಾಕ್ಟ್ರು ಬಂದಿದಾರೆ. ಡಿಗ್ರಿ, ಸರ್ಟಿಫಿಕೇಟ್ ಏನಿಲ್ಲ. ಅವರೇ ಕೊಡೋ ಔಷಧಿ. ಬೇರೆ ಬೇರೆ ಬಣ್ಣದ ಗುಳಿಗೆ, ಉಂಡೆಯಂತಹ ಔಷಧಿಗಳು ಯಾವ ಔಷಧಿ ಅಂಗಡಿಯಲ್ಲೂ ಸಿಗಲ್ಲ, ತಿಂಗಳಿಗಾಗುವಷ್ಟು ಕೊಡುತ್ತಾರೆ, ಮತ್ತೆ ಹೋಗಿ ತರಬೇಕು ಎಂದರು. ನನ್ನ ಅನುಮಾನ ದೃಢಪಡಿಸಲು ರಕ್ತಮೂತ್ರ ಪರೀಕ್ಷೆಗಳಿಗೆ ಕಳುಹಿಸಿದರೆ ಅವರಿಗೆ ಆಗಲೇ ಸಕ್ಕರೆ ಕಾಯಿಲೆ, ಬಿ.ಪಿ. ಎರಡೂ ಬಂದದ್ದು ದೃಢವಾಯ್ತು. ಗುಳಿಗೆ ಉಂಡೆಗಳು ಸ್ಟೀರಾಯ್ಡ್ ಎನ್ನುವುದಕ್ಕೆ ಅವರ ಉಬ್ಬಸ ವಾಸಿಯಾಗಿದ್ದೇ ಸಾಕ್ಷಿ. ಈಗ ಇನ್ನೆರಡು ಕಾಯಿಲೆಗಳ ಸೇರ್ಪಡೆಯಾಗಿದ್ದೂ ಈ ಉಂಡೆ, ಗುಳಿಗೆಗಳಿಂದಲೇ!

***

ಈ ರೀತಿಯ ಹತ್ತು ಹಲವು ಅನುಭವಗಳು ನನ್ನಂತಹ ಸಲಹಾ ವೈದ್ಯರಿಗೆ ಸಾಮಾನ್ಯ. ಇಂಗ್ಲಿಷ್ ವೈದ್ಯರ ಔಷಧಿಯಲ್ಲಿ ವಾಸಿ ಆಗೋಲ್ಲ ಎಂದು ಗೊತ್ತಾದ ತಕ್ಷಣ ಖಂಡಿತಾ ಆಗುತ್ತೆ ಎನ್ನುವ ವೈದ್ಯರ ಹತ್ತಿರ ಸಿಕ್ಕಿ ಹಾಕಿಕೊಂಡ ರೋಗಿಗಳ ಚರಿತ್ರೆ ಚಿತ್ರ ಕಥೆ ಇನ್ನೂ ಕಷ್ಟ.

ಇಷ್ಟೆಲ್ಲಾ ಆಗಲು, ವಿಶೇಷ ಅನುಭವಗಳಿಗೆ ಕಾರಣ ಏನು ಗೊತ್ತೇ– 'ಸ್ಟೀರಾಯ್ಡ್' ಎನ್ನುವ ದಿವ್ಯ ಔಷಧಿ. ಇದೊಂದು ಹರಿತವಾದ ಎರಡು ಅಲಗುಳ್ಳ ಕತ್ತಿ ಇದ್ದಂತೆ. ಬರೆದು ಕೊಡುವ ವೈದ್ಯರಿಗೂ, ಬಳಸುವ ರೋಗಿಗೂ ಮುಕ್ತವಾಗಿ ಇದರ ವಿಚಾರ ತಿಳಿದಿರಲೇಬೇಕು. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟದ್ದು. ಇದೇ ಸ್ಟೀರಾಯ್ಡ್ ಮಾತ್ರೆಯನ್ನು ಪುಡಿ ಮಾಡಿ ಬೇರೆ ಬೇರೆ ರೂಪದಲ್ಲಿ ಸೊಪ್ಪಿನ ಉಂಡೆ, ಸಿರಪ್, ಕಷಾಯ ಇತರೆ ಗಿಡಮೂಲಿಕೆಗಳೆನ್ನುವ ಔಷಧಿಗಳ ಜೊತೆ, ಲೇಹ್ಯದ ರೂಪದಲ್ಲಿ ತಿನ್ನುತ್ತಿರುವ ರೋಗಿಗಳು ನಮ್ಮ ದೇಶದಾದ್ಯಂತ ಇದ್ದಾರೆ.

ಓದುಗರು ದಯವಿಟ್ಟು ಗಮನಿಸಿ. ನಾನು ಹೇಳುತ್ತಿರುವುದು ಸ್ಟೀರಾಯ್ಡ್‌ನ ರೂಪಾಂತರದ ಮೋಸದ ಔಷಧಗಳ ಬಗ್ಗೆ. ಇತರೆ ವೈದ್ಯಕೀಯ ಪದ್ಧತಿಗಳಾದ ಯುನಾನಿ, ಹೋಮಿಯೋ, ಆಯುರ್ವೇದ ಔಷಧಗಳ ಬಗ್ಗೆ ಅಲ್ಲ. ಈ ಲೇಖನ ಓದಿ ಆಯುರ್ವೇದ ಔಷಧಿಗಳೆಲ್ಲವೂ ಸ್ಟೀರಾಯ್ಡ್ ಎನ್ನುವ ತಪ್ಪು ಅರ್ಥವನ್ನೋ ಅಥವಾ ನನ್ನನ್ನು ಇತರೆ ವೈದ್ಯಕೀಯ ಪದ್ಧತಿಗಳ ವಿರೋಧಿ ಎಂದು ಅನಿಸುವವರಿಗೆ ಕಿವಿಮಾತು. ನಾನು ಸ್ಟೀರಾಯ್ಡ್ ದುರ್ಬಳಕೆಯ ಅಥವಾ ರೋಗಿಗೆ ಗೊತ್ತಿಲ್ಲದಂತೆ ಇದನ್ನು ನುಂಗಿಸುವವರ ವಿರೋಧಿ ಮಾತ್ರ.

ಹಾಗಂತ ಸ್ಟೀರಾಯ್ಡ್ ಅಲೋಪಥಿ ಪದ್ಧತಿಯಲ್ಲಿ ಬಹಳ ಅಗತ್ಯ ಬಳಕೆಯಲ್ಲಿದೆ. ಕೆಲವು ಕಾಯಿಲೆಗಳ ಪ್ರಾಣಾಂತಿಕ ಸಂದರ್ಭಗಳಲ್ಲಿ, ನಿರ್ದಿಷ್ಟ ಕಾರಣಗಳಿಗೆ, ಕೆಲವಷ್ಟು ದೀರ್ಘ ಕಾಲದ ಕಾಯಿಲೆಗಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ದಿನ, ವಾರ, ತಿಂಗಳವರೆಗಿನ ಬಳಕೆ ವೈದ್ಯರ ನಿರ್ದೇಶನದಂತೆ ನಡೆಯಬೇಕು. ಕಾಯಿಲೆ ಹತೋಟಿಗೆ ಬಂದು ಪರಿಸ್ಥಿತಿ ಉತ್ತಮವಾದ ತಕ್ಷಣ ಸ್ಟೀರಾಯ್ಡ್‌ನ ಪ್ರಮಾಣವನ್ನು ನಿಧಾನವಾಗಿ ಕಡಿಮೆ ಮಾಡುತ್ತಾರೆ, ಇಲ್ಲ ನಿಲ್ಲಿಸುತ್ತಾರೆ.

ಸ್ಟೀರಾಯ್ಡ್‌ನ್ನು ಜೀವನಪೂರ್ತಿ ಬಳಸಬೇಕಾದ ಸಂದರ್ಭಗಳೂ, ಕಾಯಿಲೆ ಗಳೂ ಇವೆ. ಬೇಕಾದಾಗ ವೈದ್ಯರು ತಿಳಿಸುತ್ತಾರೆ. ನಕಲಿ ವೈದ್ಯರ ಸಂಖ್ಯೆ, ಹಾವಳಿ ಜಾಸ್ತಿ ಆದಂತೆ ಸ್ಟೀರಾಯ್ಡ್ ರಾಮಬಾಣವನ್ನು ದಿಕ್ಕುದೆಸೆಯಿಲ್ಲದೆ ಎಸೆಯುವ ಸಂದರ್ಭಗಳೂ ಹೆಚ್ಚುತ್ತಿವೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಮುಖ್ಯಸ್ಥರೇ ಕೆಲವು ಸಾವಿರ ಕೋಟಿಗಳ ಹಗರಣದಲ್ಲಿ ಸಿಕ್ಕಿ ಹಾಕಿಕೊಂಡ ಈ ದೇಶದಲ್ಲಿ ಔಷಧಿಗಳ ಗುಣಮಟ್ಟ, ಮಾರಾಟದ ನಿರ್ಬಂಧ, ವೈದ್ಯಕೀಯ ವೃತ್ತಿಯ ನೈತಿಕತೆ ಎಲ್ಲಾ ಪ್ರಶ್ನಾರ್ಥಕ ಚಿನ್ಹೆಗಳಾಗಿವೆ. ಹಾಗಾಗಿ ನಮ ವ್ಯವಸ್ಥೆ, ಅವಸ್ಥೆಗಳನ್ನು ದೂರುವುದಕ್ಕಿಂತ ಜನ ಸಾಮಾನ್ಯರಿಗೆ ಸ್ಟೀರಾಯ್ಡ್ ದುರ್ಬಳಕೆಯ ಮಾಹಿತಿಗಾಗಿ ಈ ಕೆಲವು ಸೂಚನೆಗಳು ಮಾರ್ಗದರ್ಶಿಯಾಗಲಿ ಎಂಬ ಹಂಬಲ.

ಹೆಸರು, ಲೇಬಲ್, ಔಷಧಿಗಳ ವಿವರಗಳಿಲ್ಲದ ಯಾವುದೇ ಔಷಧಿಗಳನ್ನು ಬಳಸುವ ಮುನ್ನ ನಿಮ್ಮ ನಂಬಿಕೆಯ ಕುಟುಂಬ ವೈದ್ಯರಿಗೆ ತೋರಿಸಿ. ಬರೆದುಕೊಟ್ಟ ಔಷಧಿ ಒಂದೇ ಊರಿನಲ್ಲಿ, ಒಂದೇ ಜಾಗದಲ್ಲಿ, ಒಂದೇ ಅಂಗಡಿಯಲ್ಲಿ ಆ ವೈದ್ಯರ ಬಳಿ ಮಾತ್ರ ಸಿಗುತ್ತದೆ. ಹೊರಗಡೆ ಚೀಟಿ ಬರೆದು ಕೊಡುವುದಿಲ್ಲ ಎಂದರೆ ವಿಚಾರಿಸಿ ನೋಡಿ. ಪುಡಿ, ಕಷಾಯ, ಲೇಹ್ಯಗಳ ಡಬ್ಬಗಳ ಮೇಲೆ ಔಷಧಿಗಳ ವಿವರಗಳಿವೆಯೇ ಎಂದು ನೋಡಿಕೊಳ್ಳಿ. ಈ ರೀತಿಯ ಕಂಪೆನಿ, ಬ್ರಾಂಡ್ ಇಲ್ಲದ ಔಷಧಿಗಳನ್ನು ಕೊಡುವ ನಕಲಿ ವೈದ್ಯರು ಒಂದೂರಿನಲ್ಲಿ ಸಾಮಾನ್ಯವಾಗಿ ಬಹಳಷ್ಟು ದಿನ ನಿಲ್ಲುವುದಿಲ್ಲ. ಕೆಲವು ತಿಂಗಳುಗಳ ನಂತರ ರೋಗಿಗಳಿಗೆ ನಿಜ ತಿಳಿಯುವ ಸಮಯದ ಒಳಗೆ ಜಾಗ ಖಾಲಿ ಮಾಡಿ ಅಡ್ರೆಸ್ ಇಲ್ಲದವರಾಗುತ್ತಾರೆ.

ಯಾವುದೇ ತುರ್ತು ಪರಿಸ್ಥಿತಿ, ಅಸ್ತಮಾ, ಅಲರ್ಜಿ, ವಾತಗಳ ತೀವ್ರತೆ ಪ್ರಾಣಾಂತಿಕವಾಗಿದ್ದಾಗ ವೈದ್ಯರು ಬರೆದ ಸ್ಟೀರಾಯ್ಡ್ ಮಾತ್ರೆಗಳನ್ನು ಮುಂದೆ ಅದೇ ತರಹದ ಸೂಚನೆ ಕಾಣಿಸಿದಾಗ ನೀವಾಗಿ ತಂದು ಬಳಸಬೇಡಿ. ವೈದ್ಯರ ಚೀಟಿ ಇಲ್ಲದೇ ಎಂತಹ ಔಷಧಿಗಳನ್ನೂ ಸಹಾ ಫಾರ್ಮಸಿಯಿಂದ ತರಬಹುದಾದ ಪರಿಸ್ಥಿತಿ ನಮ್ಮ ದೇಶದಲ್ಲಿದೆ.

ಬಹಳ ವರ್ಷಗಳಿಂದ ಸ್ವಲ್ಪವೂ ಕಡಿಮೆಯಾಗದ ಅಸ್ತಮಾ, ಅಲರ್ಜಿ, ಚರ್ಮ ರೋಗ, ವಾತಗಳು ಈ



ರಾಮಬಾಣದಂತಹ ಕುಲ–ಗೋತ್ರಗಳಿಲ್ಲದ ನಕಲಿ ಔಷಧಿಗಳಿಂದ ಕೆಲವೇ ದಿನಗಳಲ್ಲಿ ಮಾಯವಾಗುವ ಲಕ್ಷಣ ಕಾಣಿಸಿದರೆ ನಿಮ್ಮ ಕುಟುಂಬ ವೈದ್ಯರಿಗೆ ತೋರಿಸಿ.

ಈಗಾಗಲೇ ನೀವು ತೆಗೆದುಕೊಳ್ಳುತ್ತಿರುವ ಪುಡಿ, ಕಷಾಯ, ಲೇಹ್ಯಗಳೆಂಬ ನಕಲಿ ಔಷಧಿಗಳಲ್ಲಿ ಸ್ಟೀರಾಯ್ಡ್ ಇರಬಹುದೆಂಬ ಅನುಮಾನವಿದ್ದರೆ, ಬಹಳ ಕಾಲದಿಂದ ತೆಗೆದುಕೊಳ್ಳುತ್ತಿದ್ದರೆ ತಕ್ಷಣ ನಿಲ್ಲಿಸಬೇಡಿ. ನಿಮ್ಮ ವೈದ್ಯರಿಗೆ ನಿಜ ಹೇಳಿ, ವಿವರಿಸಿ, ಔಷಧಿ ತೋರಿಸಿ. ನಿಲ್ಲಿಸುವ ವಿಧಾನವನ್ನು ವೈದ್ಯರು ತಿಳಿಸುತ್ತಾರೆ.

ನಿಮ್ಮ ಸಂಶಯ, ಅನುಮಾನ ಪರಿಹಾರವಾಗದಿದ್ದರೆ ನೀವು ಉಪಯೋಗಿಸುವ ಹೆಸರಿಲ್ಲದ ಮಾತ್ರೆ, ಪುಡಿ, ಕಷಾಯ, ಲೇಹ್ಯಗಳನ್ನು ರಾಸಾಯನಿಕ ಪರೀಕ್ಷೆಗೆ ಗುರಿಪಡಿಸಿ. ಸ್ಟೀರಾಯ್ಡ್ ಇದೆಯೋ ಇಲ್ಲವೋ ಎಂದು ಕಂಡುಹಿಡಿಯುವ ಕೇಂದ್ರಗಳು ಎಲ್ಲಾ ನಗರಗಳಲ್ಲಿ, ಫಾರ್ಮಸಿ ಕಾಲೇಜುಗಳಲ್ಲಿ ಇವೆ.

ಸದ್ಯಕ್ಕೆ ಮಾತ್ರೆ, ಇಂಜೆಕ್ಷನ್ ರೂಪದಲ್ಲಿ ಇರುವ ಸ್ಟೀರಾಯ್ಡ್ ಔಷಧಿಗಳು ನಮ್ಮ ದೇಶದ ಅಲೋಪಥಿ ಪದ್ಧತಿಯಲ್ಲಿ ಲಭ್ಯ. ಇವೆಲ್ಲದಕ್ಕೂ ವೈಜ್ಞಾನಿಕ ಸಂಶೋಧನೆಗಳಿಂದ, ಪ್ರಮಾಣ, ಉಪಯೋಗಿಸಬೇಕಾದ ಸಂದರ್ಭಗಳು ನಿಖರವಾಗಿ ನಿರ್ಧಾರವಾಗಿರುವುದರಿಂದ ವೈದ್ಯರು ಬಳಸುತ್ತಾರೆ. ■